ನೀರಾವರಿಯಾಗುವುದು. ಗ್ರಾಮವಾರು ವಿವರಗಳು ಯೋಜನೆಯ ವರದಿ ಪೂರ್ಣಗೊಂಡ ನಂತರ ಗುರುತಿಸಬಹುದುದಾಗಿದೆ.

ಉ) ಯೋಜನೆಯ ರೂಪರೇಷೆಯನ್ನು ತಾಂತ್ರಿಕ ಸಮಿತಿಯ ಹಲವಾರು ಸೂಚನೆಗಳಿಗನುಸಾರ ತಯಾರಿಸಬೇಕಾದ್ದುದರಿಂದ ವಿಳಂಬವಾಗಿದೆ.

ಸಂಗೊಳ್ಳಿಯಲ್ಲಿ ಶಾಲಾ ಕೋಣೆಗಳನ್ನು ಕಟ್ಟುವ ಬಗ್ಗೆ

2163: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿಯಲ್ಲಿ ನೀರಾವರಿ ಇಲಾಖೆಯವರು ಕಟ್ಟಿದ ಶಾಲೆಯನ್ನು ಕೆಡವಿ ಅದೇ ಸಾಮಾನುಗಳನ್ನು ಉಪಯೋಗಿಸಿ ಶಾಲೆಯ ಕಟ್ಟಡ ಕಟ್ಟಲು ಅಂದಿನ ಲೋಕೋಪಯೋಗಿ ಸಚಿವರು ಆದೇಶ ನೀಡಿದ್ದರೂ ಯಾವುದೇ ಕ್ರಮಕ್ಕೆಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು):–

ಅ) ಸಂಗೊಳ್ಳಿಯಲ್ಲಿ ದುಸ್ಥಿತಿಯಲ್ಲಿದ್ದ ಶಾಲಾ ಕಟ್ಟಡವನ್ನು ಕೆಡವಲು ದಿನಾಂಕ 2.5.1992ರ ಸರ್ಕಾರಿ ಪತ್ರದಲ್ಲಿ ಅನುಮತಿ ನೀಡಲಾಗಿದೆ. ಸದರಿ ಕಟ್ಟಡದಲ್ಲಿ ಸಿಕ್ಕಬಹುದಾದ ಉಪಯುಕ್ತ ವಸ್ತುಗಳನ್ನು ಉಪಯೋಗಿಸಿ ಶಾಲಾ ಕಟ್ಟಡವನ್ನು ಪುನರ್ ನಿರ್ಮಾಣ ಮಾಡುವ ಬಗ್ಗೆ ಪ್ರಸ್ತಾವನೆಯು ಯೋಜನಾ ಮಟ್ಟದಲ್ಲಿ ತಯಾರಿಕೆಯ ಹಂತದಲ್ಲಿದೆ.

ಆ) ಅಂದಾಜು ಪಟ್ಟಿ ತಯಾರಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಬೈಲಹೊಂಗಲ ತಾಲ್ಲೂಕ್ ಪೈಕಿ ಮೈಕೇಲ ಮರಡಿ ನೀರಾವರಿ ಕೆಲಸ ಪ್ರಾರಂಭ

650: ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):– ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕ್ ಪೈಕಿ ಮೈ ಕೇಲಮರಡಿ ನೀರಾವರಿ ಕೆಲಸ 1992–93ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ಸೇರಿರುವುದು ನಿಜವೇ;

ಆ) 1992–93ನೇ ಸಾಲಿನಲ್ಲಿ ಈ ಕೆಲಸಕ್ಕೆ ಎಷ್ಟು ಹಣವನ್ನು ಒದಗಿಸಲಾಗಿದೆ;

ಇ) ಈ ಕೆಲಸಕ್ಕೆ ಸರ್ಕಾರದಿಂದ ಆಡಳಿತಾತ್ಮಕ ಮಂಜುರಾತಿಯನ್ನು ಇದುವರೆಗೂ ಕೊಡದೇ ಇದ್ದದ್ದರಿಂದ ಈ ಕೆಲಸಗಳು ಪ್ರಾರಂಭವಾಗಿರುವುದಿಲ್ಲವೆಂಬುದು ನಿಜವೇ;

ಈ) ಹಾಗಿದ್ದಲ್ಲಿ ಎಷ್ಟು ದಿವಸಗಳಲ್ಲಿ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಲಾಗುವುದು;

ಉ) ಉತ್ತರ ಕರ್ನಾಟಕ ನೀರಾವರಿ ಕೆಲಸಗಳು ಆಯವ್ಯಯ ಪಟ್ಟಿಯಲ್ಲಿ ಸೇರಿದ್ದರೂ ಕೂಡ ಆ ಕೆಲಸಗಳು ಬೇಗ ಪ್ರಾರಂಭವಾಗಬಾರದೆಂಬ ಉದ್ದೇಶದಿಂದ ಹಾಗೂ ಸರ್ಕಾರದಲ್ಲಿ ಹಣ ಇಲ್ಲದೆ